9. ಮಹದೇವ ಜವಳಿ ಗಿರಣಿ ನಿ., (ಎಂ.ಟಿ.ಎಂ)
10. ಹಟ್ಟಿ ಗೋಲ್ಡ್ ಮೈನ್ಸ್ ನಿಯಮಿತ (ಹೆಚ್.ಜಿ.ಎಂ.ಎಲ್)
11. ಮೈಸೂರು ಬಣ್ಣ ಮತ್ತು ಅರಗು ನಿಯಮಿತ (ಎಂ.ಪಿ.ವಿ.ಎಲ್)
12. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ)
13. ಎನ್.ಜಿ.ಇ.ಎಫ್ (ಹುಬ್ಬಳ್ಳಿ)

ಆ) ಕಾಗದ, ಸಕ್ಕರೆ, ಟ್ರಾನ್ಸ್‌ಫಾರ್ಮರ್‌ಗಳು, ಸಾಬೂನು ಮತ್ತು ಮಾರ್ಜಕ, ಅಗರಬತ್ತಿ, ಟಾಲ್ಕಮ್ ಪೌಡರ್, ವಿದ್ಯುತ್ ದೀಪಗಳು, ಬಣ್ಣ, ಅರಗು, ಇಂಡಲಿಬಲ್ ಇಂಕ್, ಇತ್ಯಾದಿಗಳು.

ಇ) ಕೆ.ಪಿ.ಟಿ.ಸಿ.ಎಲ್., ಕೆ.ಎಸ್.ಆರ್.ಟಿ.ಸಿ., ಸರ್ಕಾರಿ, ಅರೆ ಸರ್ಕಾರಿ ಇಲಾಖೆಗಳು, ಖಾಸಗೀ ಸಂಸ್ಥೆಗಳು / ವ್ಯಕ್ತಿಗಳು.

ಈ) ವಿದ್ಯುತ್ ಉಪಕರಣಗಳು, ಟ್ರಾನ್ಸಫಾರ್ಮರಗಳನ್ನು ಕೆ.ಪಿ.ಟಿ.ಸಿ.ಎಲ್., ಎಸ್ಕಾಂ, ಖರೀದಿಸುತ್ತಿವೆ. ಕಾಗದ, ಸಕ್ಕರೆ, ಸಾಬೂನು ಮತ್ತು ಮಾರ್ಜಕ, ಅಗರಬತ್ತಿಗಳು, ಟಾಲ್ಕಮ್ ಪೌಡರ್, ವಿದ್ಯುತ್ ದೀಪಗಳು, ಬಣ್ಣ, ಅರಗು ಮತ್ತು ಇಂಡೆಲಿಬಲ್ ಇಂಕ್, ಇವುಗಳನ್ನು ಸರ್ಕಾರಿ ಸ್ವಾಮ್ಯದ ಕಂಪನಿಗಳಿಂದಲೇ ಖರೀದಿಸುವಂತೆ, ಸರ್ಕಾರಿ ಸ್ವಾಮ್ಯದ ಎಲ್ಲಾ ಮಂಡಳಿಗಳಿಗೆ ಹಾಗೂ ಸರ್ಕಾರಿ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿರುವ ವಿದೇಶಿ ಸಹಭಾಗಿತ್ವದ ಕೈಗಾರಿಕೆಗಳು

3136 (3623) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಪೈಕಿ ವಿದೇಶಿ ಸಹ ಭಾಗಿತ್ವದ ಕೈಗಾರಿಕೆಗಳು ಯಾವುವು?

ಆ) ಸದರಿ ಕೈಗಾರಿಕೆಗಳಲ್ಲಿ ಉತ್ಪಾದಿಸುವ ಉತ್ಪನ್ನಗಳ ವಿವರ ನೀಡುವುದು;

ಇ) ಈ ಕೈಗಾರಿಕೆಗಳಲ್ಲಿನ ಕನ್ನಡಿಗರ ಸಂಖ್ಯೆ ಹುದ್ದೆ ಇತ್ಯಾದಿ ವಿವರಗಳನ್ನು ನೀಡುವುದು;

ಈ) ಸದರಿ ಕೈಗಾರಿಕೆಗಳಲ್ಲಿನ ಕನ್ನಡಿಗರ ಹಿತರಕ್ಷಣೆಗೆ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರಾಜ್ಯದಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಪೈಕಿ 105 ಉದ್ಯಮಗಳು ವಿದೇಶಿ ಸಹಭಾಗಿತ್ವ ಹೊಂದಿರುತ್ತವೆ.

ಆ) ವಿದೇಶಿ ಸಹಭಾಗಿತ್ವ ಹೊಂದಿರುವ ಉದ್ದಿಮೆಗಳು ಪ್ರಮುಖವಾಗಿ ಎಲೆಕ್ಟ್ರಾನಿಕ್ಸ್ ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್ ಜವಳಿ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುತ್ತಿವೆ.

ಇ) ಈ ಕೈಗಾರಿಕೆಗಳಲ್ಲಿ ಒಟ್ಟು 41968 ಕನ್ನಡಿಗರು ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಕೈಗಾರಿಕೆಗಳಲ್ಲಿನ ಕಾರ್ಮಿಕರ ಹಿತ ರಕ್ಷಣೆಗೆ ಕಾರ್ಮಿಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್ ನಿರೀಕ್ಷಕರ ಇಲಾಖೆ, ಜಿಲ್ಲೆಯ ಜಿಲ್ಲಾಧಿಕಾರಿಗಳಲ್ಲಿ ಕಾನೂನು ನಿಯಮಗಳು ಜಾರಿ ಇದ್ದು ಇವು ಕನ್ನಡಿಗರು ಸೇರಿದಂತೆ ಎಲ್ಲಾ ಕಾರ್ಮಿಕರ ಹಿತರಕ್ಷಣೆ ಮಾಡುತ್ತವೆ.